ಡಿ.ಡಬ್ಲ್ಯು-01

ಹಾರೀಶ್ ಇಕ್ಬಾಲ್

**ಸಾಕ್ಷಿಯನ್ನು ದಿನಾಂಕಃ 14.11.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿಗಳ ಪರ ಶ್ರೀ. ಡಿ.ಆರ್.ಎಂ ವಕೀಲರಿಂದಃ**

ವಾದಿಗಳು ಈ ದಾವೆಯಲ್ಲಿ ಏನು ದಾಖಲೆಗಳನ್ನು ಹಾಜರುಪಡಿಸಿರುತ್ತಾರೆಂದು ಗೊತ್ತಿರುವುದಿಲ್ಲ. ವಡ್ಡಗುಡಿ ಗ್ರಾಮದ ಸ.ನಂ.17 ರಲ್ಲಿ ಒಟ್ಟು ಎಷ್ಟು ಎಕರೆ ಜಮೀನು ಇರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ನಾನು ನಿ.ಡಿ-1 ಕ್ರಯ ಪತ್ರದಡಿಯಲ್ಲಿ ವಡ್ಡರಗುಡಿ ಗ್ರಾಮದ ಸ.ನಂ.39/1 ರಲ್ಲಿ 2-00 ಎಕರೆ ಜಮೀನನ್ನು ರುಕ್ಮೀಣಿಯಮ್ಮ ರವರಿಂದ ಖರೀದಿ ಮಾಡಿರುತ್ತೇನೆ. ಅವರಿಗೆ ಸದರಿ ಜಮೀನು ಹೇಗೆ ಬಂದಿರುತ್ತದೆ ಎಂಬ ಬಗ್ಗೆ ದಾಖಲೆಯನ್ನು ನೋಡಿರುತ್ತೇನೆ. ಅವರ ಹೆಸರಿನಲ್ಲಿರುವ ಆರ್.ಟಿ.ಸಿ, ಕ್ರಯಪತ್ರ ಇತ್ಯಾದಿಗಳನ್ನು ನೋಡಿರುತ್ತೇನೆ. ಸದರಿ ಕ್ರಯಪತ್ರ ನನ್ನ ಬಳಿ ಇರುತ್ತದೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಆ ರೀತಿ ರುಕ್ಮೀಣಮ್ಮ ರವರ ಹೆಸರಿನಲ್ಲಿ ಇರುವ ಕ್ರಯಪತ್ರವನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನಿ.ಡಿ-3 ರಂತೆ ಹಾಜರುಪಡಿಸಿದ ಮಂಜೂರಾತಿ ಪತ್ರದ ಪ್ರಕಾರ ಸದರಿ ರುಕ್ಮೀಣಮ್ಮ ರವರಿಗೆ ಸದರಿ ಆಸ್ತಿ ಸರ್ಕಾರದಿಂದ ಮಂಜೂರಾಗಿರುವ ಬಗ್ಗೆ ದಾಖಲೆಗಳಾಗಿರುತ್ತವೆ ಎಂದರೆ ಸರಿ. ನಾನು ಹಾಜರುಪಡಿಸಿದ ಸದರಿ ಮಂಜೂರಾತಿ ಪತ್ರದಲ್ಲಿ ವಡ್ಡರಗುಡಿ ಸ.ನಂ.17 ರ ಪೈಕಿ ಬ್ಲಾಕ್ ನಂ.3 ರಲ್ಲಿ ಜಮೀನು ಮಂಜೂರಾದ ಬಗ್ಗೆ ನಮೂದು ಇರುತ್ತದೆ ಎಂದರೆ ಸರಿಯಲ್ಲ. ಸದರಿ ಮಂಜೂರಾತಿ ಪತ್ರಕ್ಕೆ ಸಂಬಂಧಿಸಿದ ಆಸ್ತಿಯ ಚೆಕ್ಕುಬಂದಿಗೆ ಸಂಬಂಧಿಸಿದಂತೆ ನಾನು ರುಕ್ಮೀಣಮ್ಮ ರವರಿಂದ ನಕಾಶೆಯನ್ನು ಪಡೆದುಕೊಂಡಿರುತ್ತೇನೆ. ಸದರಿ ನಕಾಶೆಯಲ್ಲಿರುವ ಚೆಕ್ಕುಬಂದಿ ಹಾಗೂ ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ ನಿ.ಡಿ-1 ರ ಷೆಡ್ಯೂಲ್

ನಲ್ಲಿ ತಿಳಿಸಿರುವ ಚೆಕ್ಕುಬಂದಿಯೇ ಬೇರೆ ಎಂದರೆ ಸರಿಯಲ್ಲ. ಆ ಕಾರಣಕ್ಕಾಗಿಯೇ ನಾನು ಸದರಿ ನಕಾಶೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿ.ಡಿ-1 ಕ್ರಯಪತ್ರದಲ್ಲಿ ತಿಳಿಸಿರುವ ಷೆಡ್ಯೂಲ್ ನ ಚೆಕ್ಕುಬಂದಿ ಆಸ್ತಿಯನ್ನು ನನಗೆ ಮಾರಾಟ ಮಾಡಲು ರುಕ್ಮೀಣಮ್ಮ ರವರಿಗೆ ಯಾವುದೇ ಹಕ್ಕು ಹಾಗೂ ಅಧಿಕಾರ ಇದ್ದಿರುವುದಿಲ್ಲ ಎಂದರೆ ಸರಿಯಲ್ಲ.

ನಾನು ವಾದಿಗಳನ್ನು ನೋಡಿರುವುದಿಲ್ಲ. ನಾನು ಕ್ರಯಕ್ಕೆ ಪಡೆದಿದ್ದೆ ಎಂದು ಹೇಳಲಾದ ಸ್ವತ್ತಿನ ಗುರತುನ್ನು ಮಾಡಿಕೊಳ್ಳುವಲ್ಲಿ ವಿಫಲನಾಗಿ ವಾದಿಗಳ ಸ್ವಾಧೀನಾನುಭವದಲ್ಲಿ ಇರುವ ದಾವಾ ಆಸ್ತಿಗೆ ತೊಂದರೆ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ. ನೀವು ನಿ.ಡಿ-1 ರಂತೆ ಜಮೀನನ್ನು ಖರೀದಿಸಿದ್ದೆ ಎಂದು ಹೇಳಲಾದ ನಂತರ ಅದನ್ನು ಅಳತೆ ಮಾಡಿಸಲು ಅರ್ಜಿ ನೀಡಿದ್ದೀರಾ ಎಂದರೆ ಸಾಕ್ಷಿ ಮೂರು ಬಾರಿ ಅಳತೆ ಮಾಡಿಸಿರುತ್ತೇನೆ ಎಂದು ನುಡಿಯುತ್ತಾರೆ. ಆ ರೀತಿ ಅಳತೆ ಮಾಡಿಸುವ ಪೂರ್ವದಲ್ಲಿ ಅಕ್ಕ-ಪಕ್ಕದ ಜಮೀನಿನವರಿಗೆ ನೋಟಿಸ್ ನೀಡಿರುತ್ತೇವೆ. ಆ ರೀತಿ ಅಳತೆ ಮಾಡಿಸಿದ ಬಗ್ಗೆ ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಿ.ಡಿ-1, ನಿ.ಡಿ-2, ನಿ.ಡಿ-4 ರಿಂದ ನಿ.ಡಿ-7 ದಾಖಲೆಗಳನ್ನು ಈ ದಾವೆಗೋಸ್ಕರ ಸೃಷ್ಟಿಸಿಕೊಂಡ ದಾಖಲೆಗಳು ಎಂದರೆ ಸರಿಯಲ್ಲ. ನಿಮ್ಮ ಮಾಲೀಕರಾದ ರುಕ್ಮೀಣಮ್ಮ ರವರಿಗೆ ನಿ.ಡಿ-3 ರಂತೆ ಸಂ.ನಂ.17 ರ ಬ್ಲಾಕ್ ನಂ.3 ರಲ್ಲಿ ಮಂಜೂರಾದ ಜಮೀನು ನಂತರ ಸಂ.ನಂ.39 ರಂತೆ ಬದಲಾದ ಬಗ್ಗೆ ಯಾವುದೇ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಎಲ್ಲಾ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆಂದು ನುಡಿಯುತ್ತಾರೆ. ಸ.ನಂ.39/2 ರಲ್ಲಿ 1

ಎಕರೆ 38 ಗುಂಟೆ ಜಮೀನಿನ್ನು ಇಬ್ರಾಹಿಮ್ ಬಿನ್ ಸತ್ತರ್ ಖಾನ್ ಖರೀದಿಸಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಆ ರೀತಿ ಇಬ್ರಾಹಿಮ್ ರವರು ಖರೀಸಿರುವ ಬಗ್ಗೆ ತಿಳಿಸಿರುತ್ತೇನೆಂದರೆ ಸರಿಯಲ್ಲ. ನಿ.ಡಿ-3 ಮಂಜೂರಾತಿ ಪತ್ರದ ಪ್ರಕಾರ ರುಕ್ಮೀಣಮ್ಮ ರವರಿಗೆ 4-00 ಎಕರೆ ಜಮೀನು ಮಂಜೂರಾತಿ ಆಗಿರುವ ಬಗ್ಗೆ ನಮೂದು ಇರುತ್ತದೆ ಎಂದರೆ ಸರಿ. ನಾನು ರುಕ್ಮೀಣಮ್ಮ ರವರಿಂದ 2-00 ಎಕರೆ ಜಮೀನನ್ನು ಖರೀದಿ ಮಾಡಿದ್ದು, ಇನ್ನು ಉಳಿಕೆ 2-00 ಎಕರೆ ಜಮೀನನ್ನು ಇಬ್ರಾಹಿಮ್ ಖರೀದಿಸಿರಬಹುದು. ನನ್ನ ಜಮೀನಿನ ದಕ್ಷಿಣ ದಿಕ್ಕಿಗೆ ಸದರಿ 2-00 ಎಕರೆ ಜಮೀನು ಇರುತ್ತದೆ. ನಾನು ಹಾಜರುಪಡಿಸಿದ ನಿ.ಡಿ-1 ಕ್ರಯಪತ್ರದ ಷೆಡ್ಯೂಲ್ ನಲ್ಲಿ ದಕ್ಷಿಣಕ್ಕೆ ರಸ್ತೆ ಎಂಬುವುದಾಗಿರುತ್ತದೆ. ಸಾಕ್ಷಿಯು ಮುಂದುವರಿದು ಸದರಿ ರಸ್ತೆಯ ನಂತರ ಸದರಿ 2-00 ಎಕರೆ ಬರುತ್ತದೆ ಎಂದು ನುಡಿಯುತ್ತಾರೆ. ಆ ರೀತಿ ರಸ್ತೆಯ ನಂತರ 2-00 ಎಕರೆ ಜಮೀನು ಇರುವ ಬಗ್ಗೆ ನಕಾಶೆ ಹಾಜರುಪಡಿಸಿರುತ್ತೇನೆ. ನಾನು ಆ ರೀತಿ ಯಾವುದೇ ನಕಾಶೆ ಹಾಜರುಪಡಿಸಿರುವುದಿಲ್ಲ ಎಂದರೆ ಸಾಕ್ಷಿ ನಾನು ಎಲ್ಲಾ ದಾಖಲೆಗಳನ್ನು ವಕೀಲರಿಗೆ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ನಾನು ನಿ.ಡಿ-1 ರಡಿಯಲ್ಲಿ ಖರೀದಿಸಿದ್ದೆ ಎಂದು ಹೇಳಲಾದ ಯಾವುದೇ ಜಮೀನು ಅಸ್ತಿತ್ವದಲ್ಲಿ ಇರುವುದಿಲ್ಲ ಬದಲಾಗಿ ಸೃಷ್ಟಿತ ದಾಖಲೆಗಳ ಆಧಾರದ ಮೇಲೆ ಅದರ ಸ್ವಾಧೀನದಲ್ಲಿ ಇರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ರೀತಿ ನನ್ನ ಜಮೀನನ್ನು ಗುರುತಿಸಲು ಆಗದೇ ದಿನಾಂಕಃ 23.11.2018 ರಂದು ವಾದಿಗಳ ಸ್ವಾಧೀನಾನುಭದಲ್ಲಿರುವ ಜಮೀನಿಗೆ ತೊಂದರೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಆ ರೀತಿ ವಾದಿಗಳಿಗೆ ತೊಂದರೆ ಕೊಟ್ಟ ನಂತರ ವಾದಿಗಳು ಈ ದಾವೆಯನ್ನು

ಹೂಡಿದ ನಂತರ ವಾದಿಗಳು ನನ್ನ ಸ್ವಾಧೀನಾನುಭಧ ಆಸ್ತಿಗೆ ತೊಂದರೆ ಕೊಟ್ಟಿರುವುದಾಗಿ ಸುಳ್ಳು ದಾವೆ ಹೂಡಿರುತ್ತೇನೆಂದರೆ ಸರಿಯಲ್ಲ. ವಾದಿಗಳಿಗೆ ನಾನು ತೊಂದರೆ ಕೊಟ್ಟ ಸಂಬಂಧ ಅವರು ನನ್ನ ವಿರುದ್ಧ ಪೋಲಿಸ್ ಠಾಣೆಗೆ ದೂರನ್ನು ನೀಡಿರುತ್ತಾರೆಂದರೆ ಸರಿ. ಸಾಕ್ಷಿಯು ಮುಂದುವರಿದು ನಾನು ಕೂಡ ಅವರ ವಿರುದ್ಧ ದೂರನ್ನು ನೀಡಿರುತ್ತೇನೆ ಎಂದು ನುಡಿಯುತ್ತಾರೆ. ನೀವು ಕ್ರಯಕ್ಕೆ ಪಡೆದಿದ್ದೀರಿ ಎಂದು ಹೇಳಲಾದ ಆಸ್ತಿಗೂ ಹಾಗೂ ನೀವು ವಾಸ ಮಾಡುವ ಮನೆಗೂ ಎಷ್ಟು ದೂರ ಇದೆ ಎಂದು ಕೇಳಲಾಗಿ ಸಾಕ್ಷಿಯು ನಾನು ಮೈಸೂರಿನಲ್ಲಿ ವಾಸವಿರುತ್ತೇನೆ. ಸಾಕ್ಷಿಯು ಮುಂದುವರಿದು ನಾನು ಕ್ರಯಕ್ಕೆ ಪಡೆದ ಆಸ್ತಿಯ ಸ್ವಾಧೀನದಲ್ಲಿ ನಾನೇ ಇರುತ್ತೇನೆಂದು ನುಡಿಯುತ್ತಾರೆ.

ವಾದಿಗಳ ಸ್ವಾಧಿನದಲ್ಲಿ ಇರುವ ದಾವಾ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ನನ್ನ ಜಮೀನನ್ನು ಗುರುತಿಸಿಕೊಳ್ಳಲು ವಿಫಲನಾಗಿ ವಾದಿಗಳ ಸ್ವಾಧೀನಕ್ಕೆ ತೊಂದರೆ ಕೊಡುತ್ತೀದ್ದೇನೆಂದರೆ ಸರಿಯಲ್ಲ. ನಾನು ಸುಳ್ಳು ಪ್ರತಿವಾದ ಪತ್ರ ಹಾಗೂ ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತೀದ್ದೇನೆಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ.</u>**

(**ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)

**ಓ ಹೇ ಕೇ ಸಾ ಸ ಇ ಒ.,**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ.**